# ಕವಲೊಡೆದ ಕಥೆ



**ಶರತ್ ಕಲ್ಕೋಡ್**
ಕಲೆ: ಮುರಳೀಧರ್ ರಾಥೋಡ್

'ಗುರ್ತು ಸಿಕ್ತೋ?' ಆರಾಮಕುರ್ಚಿಯಲ್ಲೊರಗಿ ಪತ್ರಿಕೆ ಓದುತ್ತಿದ್ದವ ಪುಟ ಓರೆಮಾಡಿ ಕಣ್ಣು ಹಾಯಿಸಿದೆ. ಹಾಡಿ ಕೊಂಬೆ ರೆಂಬೆಗಳೆಡೆಯ ಸೂರ್ಯ ಕಿರಣಗಳ ನೆರಳಾಟದಿಂದಾಗಿ, ಜಗುಲಿ ಸಿಮೆಂಟ್ ತಿಟ್ಟೆಯಾಚೆ, ಅಂಗಳದ ಆ ತುದಿಯಲ್ಲಿ ನಿಂತಿದ್ದವನ ಗುರುತಿಸಲು ತಡಕಾಡಿದೆ. ಹುಂ..ಹೂಂ. ಇಲ್ಲವೆನ್ನುವ ಹಾಗೂಯಿಲ್ಲ, ನೆನಪಿನಚ್ಚಿನೊಳಗೆ ಎರಕಹೊಯ್ದು, ಎಷ್ಟೋ ವರ್ಷಗಳ ಮೇಲೆ ಮುಖಾಮುಖಿಯಾದ ಮಾಸಲುಮಾಸ ಮುಖ. ನೆರೆತ ಗಡ್ಡಮೀಸೆ, ದಟ್ಟಗುಂಗುರುಕೂದಲು, ಅಗಲಹಣೆ, ನೀಳಮೂಗು, ದಪ್ಪತುಟಿ, ಉಬ್ಬಿದಬಾಚಿ ಹಲ್ಲು, ಚೂಪು ಗಲ್ಲ. ಪಾನ್‌ಪರಾಗ್ ಮೆಲುಕಾಡುವ ಬಾಯಿ, ರಸ ಹೊರ ಹೊಮ್ಮದಂತೆ, ಸೊಡ್ಡು ಮೇಲೆತ್ತಿ ಮಾತಾಡುವ ವಿಶಿಷ್ಟ ವರಸೆಯೆಲ್ಲಾ ಅವೇ! ಅಲ್ಲ... ಅಲ್ಲ, ಬಡ್ಡುಗಟ್ಟಿದ ಉಡುಗೆತೊಡುಗೆ. ಗುಂಡು ಮಿಶ್ರಿತ ಮೈಬೆವರ ಮುಗ್ಗಲು ಘಮಘಮ. ದರ್ಪ ದೌಲತ್ತುಗೆ ಇಸ್ತ್ರಿ ಹಾಕಿ ತಿದ್ದಿತೀಡಿ ಕಾಲ ಬಸವಳಿಸಿದ್ದರೂ ಬಿಡದ ಅದೇ ಗತ್ತು! ಥಕ್ಕನೆ ದಕ್ಕಲು ಕಷ್ಟವಾದ ಮುಖ. ಇದ್ದದ್ದನ್ನಿದ್ದಾಗೆ ಹೇಳಲಾಗದ ಮುಜುಗರ. ಎದುರಾಳಿ ತಳಮಳ ಗ್ರಹಿಸುತ್ತ ಸವಾಲೆಸೆವ ಹುಸಿನಗೆ! ಕೊನೆಗೂ ಬಚಾವ್ ಮಾಡಿದ್ದು ಆ ಮಹಾಶಯನೇ! 'ನಾನು ಕಣೋ, ಅಮರೇಂದ್ರ...' ಅವಾಕ್ಕಾದೆ. ಹೌದು ಅವನೇ! ಕೆಲವು ದಿನಗಳಿಂದ ಊರವರ ಮಾತುಕತೆಯ ನಡುವೆ ತರತರದ ಜಿಜ್ಞಾಸೆ, ಬಗೆಬಗೆಯ ಅವತಾರ ಕಥೆ ಕೇಳಿ, ಖುದ್ದು ಭೇಟಿಯಾಗಿ ಅವನ ಬಾಯಿಂದಲೇ ಹೆಚ್ಚಿನ ವಿವರ ಪಡೆಯುವ ತರಾತುರಿಯಲ್ಲಿದ್ದೆನೋ, ಅದೇ ಅಮರೇಂದ್ರ!

'ಬಾರಯ್ಯಾ, ಕಾಫೀ ಕುಡಿಯೋಣ..' ಆಹ್ವಾನಿಸಿದೆ.

'ಈಗ ಬರಲ್ಲಾ, ತೋಟದ ಉದಿ ಹಾಕಲು ಉಮರಣ್ಣನ ಕಡೆ ಬಂದಿದ್ದೇನೆ. ಮಣ್ಣು ಬಹಳ ದೂರ. ಹದಿನೈದಿಪ್ಪತ್ತು ಜನರಿದ್ದಾರೆ. ಇವತ್ತು ಪುರುಸೊತ್ತಿಲ್ಲ... ನನ್ನ ಹತ್ರ ಅದೇನೋ ಮಾತನಾಡಬೇಕೂಂತಿದ್ದೆ ಯಂತಲ್ಲಾ? ಬಿಡುವಾದಾಗ ಮನೆ ಕಡೆ ಬಾ. ವಂಶವೃಕ್ಷಕ್ಕೆ ನಮ್ಮನ್ನ ಸೇರಿಸದೇ, ಕೈಬಿಡುವ ಆಲೋಚನೆಯಂತೆ...!' ಅವಸರವಸರವಾಗಿ ಉತ್ತರಿಸುತ್ತಾ, ಪಾಗರ ದಾಟಿ ಮೆಟ್ಟಲಿಳಿದು ಅಡಿಕೆ ಬಾಳೆಮರಗಳೆಡೆಯಲ್ಲಿ ಮರೆಯಾದ.

ಹೊಟ್ಟೆಪಾಡಿನ ನಿಮಿತ್ತ ಮಂಗಳೂರು, ಮಣಿಪಾಲ, ಬೆಂಗಳೂರೂ ಅಂತ ಸುಮಾರು ಮೂವತ್ತು ಮೂವತ್ತೆಂಟು ವರ್ಷ ಅಲೆಮಾರಿಯಾಗಿದ್ದರೂ, ಊರ ಕರಳುಬಳ್ಳಿನಂಟು ಹರಿದುಕೊಳ್ಳದೇ ಜತನವಾಗಿಯೇ ಕಾಪಾಡಿಕೊಂಡು ಬಂದಿದ್ದೆ. ಅಪರೂಪಕ್ಕೆ ಬಂದಾಗಲೆಲ್ಲಾ ಊರಲ್ಲಿ ಪ್ರಧಾನವಾಗಿ ಕೇಳಿಬರುತ್ತಿದ್ದದ್ದೇ ಅಮರೇಂದ್ರನ, ಕುಡಿತಬಾಡೂಟ, ಇಸ್ಪೀಟಾಟದ ಮೋಜು, ಸಾಲ ಮಿತಿಮೀರಿ ದಿವಾಳಿಯಾಗಿ ಜಮೀನು ಮಾರಿ, ಪಲಾಯನಗೈದು ತಲೆಮರೆಸಿಕೊಂಡದ್ದು. ಆರೇಳು ತಿಂಗಳ ಮೇಲೆ ಮತ್ತೆ ಪ್ರತ್ಯಕ್ಷನಾದದ್ದು. ಕೆಲವು ದಿನ ಊರಲ್ಲಿದ್ದು ಮತ್ತೆ ನಾಪತ್ತೆಯಾಗುವುದು. ಕ್ರಮೇಣ ಈ ಕಣ್ಣು ಮುಚ್ಚಾಲೆಯಾಟ ಹವ್ಯಾಸವಾಗಿ,